# ದಿಗಿಲು ಬಾಗಿಲು



ಈ ತೆರೆದ ಬಾಗಿಲು ನೋಡಿದರೆ ಎಂಥವರಿಗೂ ದಿಗಿಲು ಆಗುವುದು. ವಿಜಯಪುರದಲ್ಲಿರುವ ಆದಿಲ್‌ಶಾಹಿ ಕಾಲದ ಐತಿಹಾಸಿಕ ಸ್ಮಾರಕ ಇಬ್ರಾಹಿಂ ರೋಜಾದ ಕಲಾತ್ಮಕ ಬಾಗಿಲು. ನೋಡುವುದಕ್ಕೆ ಲಾಕ್ಷಾ ಮತ್ತು ಕಟ್ಟಿಗೆಯಿಂದ ಮಿಶ್ರಗೊಂಡ ಕಲಾಕೃತಿಯಂತಿದೆ. 'ಸಾಗ ಲಕಡಿ' ಎಂದು ಕರೆಯಲ್ಪಡುವ ಕಾಡು ಜಾತಿಯ ಮರದ ಕಟ್ಟಿಗೆಯಿಂದ ಇದನ್ನು ನಿರ್ಮಿಸಲಾಗಿದೆ. ಬೇವಿನ ಕಟ್ಟಿಗೆಯ ಕೆಲ ಅಂಶವನ್ನು ಹೊಂದಿದೆ. 368 ವರ್ಷಗಳ ಇತಿಹಾಸವನ್ನು ಹೊಂದಿರುವುದು. ಬಾಗಿಲ ಮೇಲೆ ಮೊನಚಾದ ಮುಳ್ಳಿನ ಆಕಾರದ ಗುಮಟೆಗಳಿವೆ. ಹಾಗೆಯೇ ಕುರಾನ್ ಸಾಲನ್ನೂ ಬರೆಯಲಾಗಿದೆ. ಸ್ಥಪತಿ. ಮಲಿಕ್ ಸಂದಲ್ ಇವರುಗಳು ನಿರ್ಮಿಸಿದ್ದಾರೆ.

• ಸುಷ್ಮಾ ಪವಾರ, ವಿಜಯಪುರ

CS Scanned with CamScanner